# 'ಮಹಾದಾನಿ'ಯಾಗುವತ್ತ..

ಕಂಪೆನಿಗಳ ಷೇರು ಬೆಲೆ ಏರುತ್ತಾ ಹೋಗಿ, ಕುಳಿತಲ್ಲೇ ಕೋಟಿಗಟ್ಟಲೆ ಡಾಲರ್ ಸಂಪಾದಿಸುವ ದೊಡ್ಡ ಕೈಗಾರಿಕೋದ್ಯಮಿಗಳೆಲ್ಲ ದಾನ ಧರ್ಮಗಳನ್ನು ಹೆಚ್ಚಿಸುವುದು ವಿದೇಶಗಳಲ್ಲಿ ಗಮನಾರ್ಹ ಸಂಗತಿಯೇನಲ್ಲ. ಆದರೆ ಭಾರತದಲ್ಲಿ ಉದ್ಯಮಿಗಳು ಅಂತಹ ಸಾಹಸಕ್ಕೆ ಕೈಹಾಕುವುದು ವಿಶೇಷ. ಟಾಟಾ, ಬಿರ್ಲಾರ ಒಂದು ಕಾಲದ ದಾನ ಧರ್ಮಗಳ ಸಂಗತಿ ಈಗ ಹಳೆಯದು. ಈಗೇನಿದ್ದರೂ ಐಟಿ ದೊರೆಗಳ ಕಾಲ. ಅಜೀಮ್ ಪ್ರೇಮ್‌ಜೀ ಈ ವಿಷಯದಲ್ಲಿ ಎಲ್ಲ ಐಟಿ ಉದ್ಯಮಿಗಳಿಗೂ ಮಾರ್ಗದರ್ಶಿ. ತಮ್ಮ ಫೌಂಡೇಷನ್ ಮೂಲಕ ಶಿಕ್ಷಣ ರಂಗಕ್ಕೂ ವಿಶೇಷ ಆದ್ಯತೆ ನೀಡಿದ್ದು ಅಜೀಮ್ ಪ್ರೇಮ್‌ಜೀ ವಿಶೇಷ. ಚುನಾವಣೆಗೆ ಮುನ್ನ ಇನ್‌ಫೋಸಿಸ್‌ನ ಮಾಜಿ ಮುಖ್ಯಸ್ಥ ನಂದನ್ ನೀಲೇಕಣಿ ಕೂಡಾ ನೂರಾರು ಕೋಟಿ ರೂಪಾಯಿಗಳ 'ಮಹಾದಾನ'ವೊಂದನ್ನು ಪ್ರಕಟಿಸಿದ್ದರು. ಇದೀಗ ಎಚ್‌ಸಿಎಲ್ ಕಂಪೆನಿಯ ಚೇರ್‌ಮನ್ 'ಪದ್ಮಭೂಷಣ ಶಿವ್ ನಾಡಾರ್' ಅವರ ಸರದಿ. ಅವರೂ ಅಜೀಮ್ ಪ್ರೇಮ್‌ಜೀಯ ದಾರಿಯಲ್ಲೇ ಮುನ್ನಡೆದಿದ್ದಾರೆ. ಶಿವ್‌ನಾಡಾರ್ ಫೌಂಡೇಷನ್ 'ಸಮುದಾಯ್' ಎಂಬ ಹೆಸರಿನ, ಭಾರತದಲ್ಲೇ ಅತ್ಯಂತ ದೊಡ್ಡ ಸಾಮಾಜಿಕ ಕ್ರಿಯಾ ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆಯಂತೆ. ಹಾಗೆಂದು ಸ್ವತಃ ನಾಡಾರ್ ಪತ್ರಕರ್ತರಿಗೆ ತಿಳಿಸಿದ್ದಾರೆ. ಶಿಕ್ಷಣ, ಉದ್ಯೋಗ, ಆರೋಗ್ಯ, ಮೂಲಸೌಲಭ್ಯ ಮತ್ತು ಕುಡಿಯುವ ನೀರು– ಇವುಗಳಿಗೆ ಆದ್ಯತೆ ಕೊಟ್ಟು ಹಲವಾರು ಎನ್‌ಜಿಓ ಗಳ ಅಧ್ಯಯನಗಳನ್ನು ಮತ್ತು ಜಾಲವನ್ನು ಬಳಸಿಕೊಂಡು ಉತ್ತರಪ್ರದೇಶ ರಾಜ್ಯದಾದ್ಯಂತ ಕೋಟ್ಯಂತರ ರೂಪಾಯಿಗಳ ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಶಿವ್ ಅವರ ಗುರಿಯಂತೆ. ಈ ಬಗ್ಗೆ ಯುಪಿ ಸರ್ಕಾರದ ಜತೆ ಒಪ್ಪಂದಕ್ಕೂ ಸಹಿ ಬಿದ್ದಿದೆ.

ತಮಿಳುನಾಡಿನಲ್ಲಿ ಹುಟ್ಟಿದ ಶಿವ್ ನಾಡಾರ್ (ಬರ್ತ್‌ಡೇ 14/7/1945) ಅವರು ಐವರು ಗೆಳೆಯರ ಜತೆಸೇರಿ 70ರ ದಶಕದಲ್ಲಿ ಕಟ್ಟಿದ್ದು ಹಿಂದೂಸ್ತಾನ್ ಕಂಪ್ಯೂಟರ್ಸ್ ಲಿಮಿಟೆಡ್. ಆಗ ಮಾಡಿದ ಹೂಡಿಕೆ 1.87 ಲಕ್ಷ ರೂಪಾಯಿ. ಆಗ ಹಾರ್ಡ್‌ವೇರ್ ಕೇಂದ್ರಿತವಾಗಿದ್ದ ಕಂಪೆನಿ ಮೈಕ್ರೊಚಿಪ್‌ಗಳನ್ನು ಮಾರುತ್ತಿತ್ತು. 80ರ ದಶಕದಲ್ಲಿ ಸಿಂಗಾಪುರದ ಮಾರುಕಟ್ಟೆಗೆ ಮುಖ ಮಾಡಿದ ಬಳಿಕ ಕಂಪೆನಿಯ ಅದೃಷ್ಟ ಕುದುರಿತು. ಮೊದಲ ವರ್ಷವೇ 10 ಲಕ್ಷ ಆದಾಯ ಬಂತು. ವರ್ಷ ಕಳೆದಂತೆ ಹಾರ್ಡ್‌ವೇರನ್ನೇ ನಂಬಿಕೊಳ್ಳದೆ, ಸಾಫ್ಟ್‌ವೇರ್ ಸಹಿತ ಲಾಭ ಗಳಿಕೆಯ ಕ್ಷೇತ್ರಗಳತ್ತ ಮುಖ ಮಾಡಿದ್ದು ಕಂಪೆನಿಯ ಮುನ್ನಡೆಗೆ ಕಾರಣವಾಯಿತು. ಆದರೆ ಈ ಮಧ್ಯೆ ಆರಂಭದ ನಿರ್ದೇಶಕ ಗೆಳೆಯರೂ ಬೇರೆ ಕಡೆ ಮುಖ ಮಾಡಿದರು. ಒಂದಿಬ್ಬರು ಮುನಿಸಿಕೊಂಡರು. ಅದೆಲ್ಲವನ್ನೂ ದಾಟಿ ಬಂದ ಬಳಿಕ, ಈಗ ಎಚ್‌ಸಿಎಲ್ ಟೆಕ್ನಾಲಜೀಸ್‌ನ ಒಟ್ಟು ವಹಿವಾಟು 6.3 ಶತಕೋಟಿ ಡಾಲರ್‌ಗೆ ಏರಿದೆ. ಅದೀಗ ಭಾರತದ ನಾಲ್ಕನೇ ಅತಿದೊಡ್ಡ ಸಾಫ್ಟ್‌ವೇರ್ ಕಂಪೆನಿ.

ಶಿವ್ ಅವರ ವೈಯಕ್ತಿಕ ಆಸ್ತಿ ಮೊತ್ತ 11.1 ಶತಕೋಟಿ ಡಾಲರ್ ದಾಟಿದೆ. ಅವರೀಗ ಭಾರತದ ಏಳನೇ ಅತಿದೊಡ್ಡ ಶ್ರೀಮಂತ. ಏಳು ತಲೆಮಾರುಗಳ ಕಾಲ ಕೂತು ಉಂಡರೂ ಕರಗದಷ್ಟು ಆಸ್ತಿ ಇರುವವರೆಲ್ಲ ಹೀಗೆ ಗ್ರಾಮೀಣ ಭಾರತದ ಬಡವರ ಕಲ್ಯಾಣದತ್ತ ಮನಸ್ಸು ಮಾಡುವುದು ಒಳ್ಳೆಯ ಕೆಲಸವೇ.

ಹಾಗೆಂದು ಶಿವ್ ವಿವಾದಾತೀತ ವ್ಯಕ್ತಿಯಲ್ಲ. ಉದ್ಯಮಿಯಾಗಿ ಅವರು ಬೆಳೆದುಬಂದ ಹಾದಿಯಲ್ಲಿ ಹಲವು ಆರೋಪಗಳನ್ನೂ ಎದುರಿಸಿದ್ದಾರೆ. ತಮ್ಮದೇ ಸ್ವಂತ ಎಂಜಿನಿಯರಿಂಗ್ ಕಾಲೇಜು ಆರಂಭಿಸಿದ ಬಳಿಕ ಶಿವ್ ಅವರು ಶಿಕ್ಷಣೋದ್ಯಮಿಯಾಗಿ ಬದಲಾದರು. ಈಗ ಹತ್ತಾರು ಕಾಲೇಜುಗಳ ಜತೆಗೆ ಶಿವ್‌ನಾಡಾರ್ ಯೂನಿವರ್ಸಿಟಿಯೂ ಇದೆ. ಐಐಟಿ–ಜೀ ಜತೆಗೂ ಅವರ ಉದ್ಯಮ ಹಿತಾಸಕ್ತಿಗಳಿವೆ. ಇಂತಹ ಶಿಕ್ಷಣೋದ್ಯಮಿಯನ್ನು ಐಐಟಿ–ಖರಗ್‌ಪುರದ ಚೇರ್‌ಮನ್ ಮಾಡಿ ಆಗಿನ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಆದೇಶ ಹೊರಡಿಸಿದ್ದು ಅಕಾಡೆಮಿಕ್ ವಲಯದಲ್ಲಿ ಭಾರೀ ಟೀಕೆಗೆ ಒಳಗಾಯಿತು. ಆದರೆ ಶಿವ್ ಇದಕ್ಕೆಲ್ಲ ಸೊಪ್ಪು ಹಾಕಲಿಲ್ಲ.

ಶಿವ್ ನಾಡಾರ್ ಅವರ ಆತ್ಮಚರಿತ್ರೆ ಪುಸ್ತಕದ್ದು ಇನ್ನೊಂದು ಕಥೆ. ಅಮೆರಿಕದ ಖ್ಯಾತ ಲೇಖಕ ಕೆವಿನ್ ಮೇನೀ ಅವರಿಗೆ 2012ರಲ್ಲಿ ಎಚ್‌ಸಿಎಲ್ ಕಂಪೆನಿಯೇ ಈ ಪುಸ್ತಕ ಬರೆಯಲು ಆಹ್ವಾನ ನೀಡಿತು. ಎರಡು ವರ್ಷ ತೆಗೆದುಕೊಂಡ ಮೇನೀ 2013ರ ಕೊನೆಗೆ ಪೂರ್ತಿ ಹಸ್ತಪ್ರತಿಯನ್ನೂ ಕೊಟ್ಟರು. ಪೆಂಗ್ವಿನ್ ಪ್ರಕಾಶನ ಈ ಪುಸ್ತಕದ ಬಿಡುಗಡೆಗೆ ಸಿದ್ಧವಾಗಿತ್ತು. ಅದೇನಾಯಿತೋ ಗೊತ್ತಿಲ್ಲ, ಕೊನೆಯ ಕ್ಷಣದಲ್ಲಿ ಶಿವ್ ನಾಡಾರ್ ಈ ಪುಸ್ತಕ ಬಿಡುಗಡೆಯಾಗದಂತೆ ನೋಡಿಕೊಂಡರು! ಪೆಂಗ್ವಿನ್ ನೀಡಿದ ಮುಂಗಡವನ್ನು ವಾಪಸ್ ಮಾಡಿದರು. ಲೇಖಕ ಮೇನೀಗೆ ಪೂರ್ತಿ ಸಂಭಾವನೆಯನ್ನೂ ನೀಡಿದರು. ಆದರೆ ಪುಸ್ತಕ ಮಾತ್ರ ಹೊರಬರಲಿಲ್ಲ. ಕಾರಣ– ಈಗಲೂ ನಿಗೂಢ! ತಮಿಳಿನ ಪ್ರಸಿದ್ಧ ಕಾದಂಬರಿಕಾರ ರಮಣಿಚಂದ್ರನ್‌ರ ಸೋದರರೂ ಆಗಿರುವ ಶಿವ್, ತಮ್ಮ ಆತ್ಮಚರಿತ್ರೆ ಪುಸ್ತಕದ ಬಗ್ಗೆ ಈಗ ಮಾತನಾಡಲೂ ಬಯಸುವುದಿಲ್ಲ. ಅದೇನೇ ಇರಲಿ, ಸದ್ಯಕ್ಕಂತೂ ಶಿವ್ ಮಹಾದಾನಿ ಆಗುವತ್ತ ಮುನ್ನಡೆದಿದ್ದಾರೆ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65